# ನಿಮ್ಮೊಡನೆ

## ಶಿಕ್ಷಣವೆಂದರೆ ವ್ಯಾಪಾರವಲ್ಲ

ಕಾಲ ಬದಲಾದಂತೆ ಸಾಮಾಜಿಕ ಸಂಬಂಧಗಳೂ ಶಿಥಿಲಗೊಳ್ಳುತ್ತಿವೆ. ಗುರು– ಶಿಷ್ಯ ಸಂಬಂಧವೂ ಇತ್ತೀಚೆಗೆ ಅರ್ಥ ಕಳೆದುಕೊಳ್ಳುತ್ತಿದೆ. ಶಿಕ್ಷಕರ ದಿನಾಚರಣೆ 25 ವರ್ಷಗಳ ಹಿಂದೆ ಹುಟ್ಟು ಹಾಕುತ್ತಿದ್ದ ಭಾವನೆಗಳಿಗೂ, ಈಗಿನ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಶಾಲೆ, ಕಾಲೇಜುಗಳಲ್ಲಿ ಇವತ್ತು ಶಿಕ್ಷಕ– ಶಿಕ್ಷಕಿ ಎಂದರೆ ವಿದ್ಯಾರ್ಥಿಗಳಿಗೆ ಹಿಂದಿನಂತಹ ಭಕ್ತಿ ಭಾವಗಳಿಲ್ಲ. ಡಾ.ರಾಧಾಕೃಷ್ಣನ್ ಅವರನ್ನು ನೆನಪಿಸಿಕೊಳ್ಳುವುದು ಇವತ್ತು ಶಿಕ್ಷಕರ ದಿನಾಚರಣೆಯ ಔಪಚಾರಿಕ ಪದ್ಧತಿಯಷ್ಟೇ ಆಗಿ ಉಳಿದಿದೆ. ‘ಶಿಕ್ಷಕರ ದಿನಾಚರಣೆಗೆ ರಜೆ ಇದೆ’ ಎನ್ನುವುದೇ ಹೆಚ್ಚು ಮಹತ್ವದ ಸಂಗತಿಯಾಗಿದೆ. ಈಗಿನ ಹೊಸ ತಲೆಮಾರು ಬದುಕನ್ನು ಗ್ರಹಿಸುವ ವಿಧಾನವೂ ಬದಲಾಗಿದೆ. ಈಗಿನ ವಿದ್ಯಾರ್ಥಿಗಳ ಪಾಲಿಗೆ ಶಿಕ್ಷಕ ಎಂದರೆ ಬೇರೆ ವೃತ್ತಿಪರರಂತೆ ಸಂಬಳ ತೆಗೆದುಕೊಂಡು ವೃತ್ತಿ ಮಾಡುವವನಷ್ಟೆ. ಗುರು–ಶಿಷ್ಯ ಪರಂಪರೆಯ ಹಳೆಯ ಕಥೆಗಳಲ್ಲಿ ಈ ತಲೆಮಾರಿನ ಬಹುತೇಕ ಯುವಜನರಿಗೆ ಯಾವ ಆಸಕ್ತಿಯೂ ಉಳಿದಿಲ್ಲ. ಶಿಕ್ಷಕರೂ ಅಷ್ಟೆ; ಪಾಠ ಮಾಡುವುದಲ್ಲದೆ ನೂರೆಂಟು ಇನ್ನಿತರ ಸರ್ಕಾರಿ ಕೆಲಸಗಳನ್ನೂ ಮಾಡಬೇಕಾಗಿರುವ ಒತ್ತಡಕ್ಕೆ ಸಿಲುಕಿ, ಒಮ್ಮೆ ತರಗತಿ ಮುಗಿದರೆ ಸಾಕು ಎಂದುಕೊಳ್ಳುವವರೇ ಹೆಚ್ಚು. ವಿದ್ಯಾರ್ಥಿಗಳಲ್ಲಿ ಏರುತ್ತಿರುವ ಬೇಜವಾಬ್ದಾರಿ ಮನೋಭಾವ, ಶಿಕ್ಷಕರ ಕಲಿಕಾ ಗುಣಮಟ್ಟದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿದೆ. ರಾಮಾಚಾರಿ ಎಂಬ ವಿದ್ಯಾರ್ಥಿಯನ್ನು ಚಾಮಯ್ಯ ಮೇಷ್ಟ್ರು ತಿದ್ದುವಂತಹ ‘ನಾಗರಹಾವು’ ಕಥೆಯನ್ನು ಈಗ ಸಿನಿಮಾ ಮಾಡಹೊರಟರೆ, ಇಡೀ ಚಿತ್ರಕಥೆಯನ್ನೇ ಪೂರ್ತಿ ಬದಲಿಸಬೇಕಾಗುತ್ತದೆ! ‘ಸಂಬಳಕ್ಕೆ ಸರಿಯಾಗಿ ಇಷ್ಟು ಕಲಿಸಿದರೆ ಸಾಕು, ಉಳಿದ ಉಸಾಬರಿ ನಮಗ್ಯಾಕೆ’ ಎಂದು ಸಜ್ಜನ ಶಿಕ್ಷಕರು ಅಂದುಕೊಳ್ಳುವಷ್ಟು ಪರಿಸ್ಥಿತಿ ಹದಗೆಟ್ಟಿದೆ. ಯಾರೂ ಯಾರನ್ನೂ ರಿಪೇರಿ ಮಾಡಲಾಗದಂತಹ ಈ ಸ್ಥಿತಿ ನಿಜಕ್ಕೂ ಆತಂಕಕಾರಿ.

ಸಂಬಳಕ್ಕೆ ಸರಿಯಾಗಿ ಇಷ್ಟು ಕಲಿಸಿದರೆ ಸಾಕು, ಉಳಿದ ಉಸಾಬರಿ ನಮಗ್ಯಾಕೆ’ ಎಂದು ಸಜ್ಜನ ಶಿಕ್ಷಕರು ಅಂದುಕೊಳ್ಳುವಷ್ಟು ಪರಿಸ್ಥಿತಿ ಹದಗೆಟ್ಟಿದೆ. ಯಾರೂ ಯಾರನ್ನೂ ರಿಪೇರಿ ಮಾಡಲಾಗದಂತಹ ಈ ಸ್ಥಿತಿ ನಿಜಕ್ಕೂ ಆತಂಕಕಾರಿ.

ಈ ಮಧ್ಯೆ ಶಿಕ್ಷಕರಿಂದಲೇ ವಿದ್ಯಾರ್ಥಿಗಳ ಮೇಲೆ ಲೈಂಗಿಕ ದೌರ್ಜನ್ಯದ ಹಲವು ಪ್ರಕರಣಗಳು ವರದಿಯಾಗುತ್ತಿದ್ದು, ಪರಿಸ್ಥಿತಿಯನ್ನು ಇನ್ನಷ್ಟು ಕುಲಗೆಡಿಸಿದೆ. ಹೈಸ್ಕೂಲ್ ಬಿಡಿ, ಪ್ರಾಥಮಿಕ ಶಾಲೆಗಳಲ್ಲೇ ಲೈಂಗಿಕ ದೌರ್ಜನ್ಯದ ಪ್ರಕರಣಗಳು ವರದಿಯಾಗುತ್ತಿರುವುದು ನೈತಿಕವಾಗಿ ನಾವು ತಲುಪುತ್ತಿರುವ ಅಧೋಗತಿಯ ಸೂಚನೆ. ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್, ಇಂಟರ್‌ನೆಟ್ ಮುಂತಾಗಿ ಹೊಸ ಶಿಕ್ಷಣ ಪದ್ಧತಿಯಲ್ಲಿ ಬಳಕೆಯಾಗುತ್ತಿರುವ ಅತ್ಯಾಧುನಿಕ ತಂತ್ರಜ್ಞಾನವೇ ಗುರು–ಶಿಷ್ಯರನ್ನು ದಾರಿ ತಪ್ಪಿಸುವ ಆಯುಧಗಳಾಗುತ್ತಿರುವುದು ಭಯ ಹುಟ್ಟಿಸುವ ವಿದ್ಯಮಾನವಾಗಿದೆ. ಶಿಕ್ಷಕರ ಮಧ್ಯೆ ನುಸುಳಿಕೊಂಡಿರುವ ಕೆಲವು ಕೀಚಕರು ಇಡೀ ಶಿಕ್ಷಕ ಸಮುದಾಯಕ್ಕೇ ಕಳಂಕ ತರುತ್ತಿರುವುದು ಎಲ್ಲರೂ ಸೇರಿ ಗಂಭೀರವಾಗಿ ಚಿಂತಿಸಬೇಕಾದ ವಿಷಯ. ಶಿಕ್ಷಣದ ಖಾಸಗೀಕರಣವಂತೂ ಅದನ್ನೊಂದು ವ್ಯಾಪಾರವೆಂಬಂತೆಯೇ ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ತಕ್ಷಣ ಉದ್ಯೋಗ ಸಿಗುವಂತಹ ವಿಷಯಗಳ ಕಡೆಗೇ ಎಲ್ಲರೂ ಗಮನ ಹರಿಸುವ ಪ್ರವೃತ್ತಿಯೂ ಇತ್ತೀಚೆಗೆ ಬೆಳೆಯುತ್ತಿದೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪರಸ್ಪರ ನಂಬಿಕೆ ಮತ್ತು ವಿಶ್ವಾಸದ ವಾತಾವರಣವನ್ನು ರೂಪಿಸುವ ಅಗತ್ಯವಿದೆ. ಗುರು–ಶಿಷ್ಯರ ಸಂಬಂಧದ ಪಾವಿತ್ರ್ಯವನ್ನು ಅರ್ಥ ಮಾಡಿಕೊಂಡು, ವಿದ್ಯಾರ್ಥಿಗಳಲ್ಲಿ ವಿಧೇಯತೆಯನ್ನು ಹಾಗೂ ಶಿಕ್ಷಕರಲ್ಲಿ ವಾತ್ಸಲ್ಯವನ್ನು ಉದ್ದೀಪನಗೊಳಿಸುವ ಮಂತ್ರದಂಡಗಳನ್ನು ಹುಡುಕಬೇಕಿದೆ. ತನ್ನ ಮಗು ದಿನದ ಅತ್ಯಂತ ಹೆಚ್ಚಿನ ಸಮಯವನ್ನು ಕಳೆಯುವ ಶಾಲೆಯಲ್ಲಿ ಒಳಗಿನ ವಾತಾವರಣ ಹೇಗಿದೆಯೆಂದು ತಿಳಿದುಕೊಳ್ಳುವುದು ಪೋಷಕರ ಹಕ್ಕೂ ಹೌದು, ಕರ್ತವ್ಯವೂ ಹೌದು. ಶಿಸ್ತಿನ ಹೆಸರಿನಲ್ಲಿ ಶಾಲೆಗಳನ್ನು ಬಂಧೀಖಾನೆಯಂತಾಗಿಸುವ ಖಾಸಗಿ ಶಾಲೆಗಳಲ್ಲೇ ಲೈಂಗಿಕ ದೌರ್ಜನ್ಯದ ಹೆಚ್ಚಿನ ಪ್ರಕರಣಗಳು ವರದಿಯಾಗಿರುವುದು ಏನನ್ನು ಸೂಚಿಸುತ್ತದೆ? ಶಿಕ್ಷಣ ಎನ್ನುವುದು ಬರಿಯ ವ್ಯಾಪಾರ ಮಾತ್ರ ಎಂದು ಭಾವಿಸುವುದರಿಂದ ಈ ರೀತಿ ಆಗುತ್ತಿದೆಯೆ?

ಈ ವರ್ಷ ‘ಶಿಕ್ಷಕರ ದಿನಾಚರಣೆ’ ಬರುವ ಮುನ್ನವೇ ಕನ್ನಡ ನಾಡು ಇಬ್ಬರು ಅದ್ವಿತೀಯ ಶಿಕ್ಷಕರನ್ನು ಕಳೆದುಕೊಂಡು ಬಡವಾಗಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಯಾದರೂ, ಪ್ರಾಧ್ಯಾಪಕರಾಗಿ ಸಾಂಸ್ಕೃತಿಕ ಜಗತ್ತಿನಲ್ಲಿ ಅಪಾರ ಪ್ರಭಾವವನ್ನು ಬೀರಿರುವ ಡಾ.ಯು.ಆರ್.ಅನಂತಮೂರ್ತಿ ಮತ್ತು ಯೋಗಶಿಕ್ಷಣದ ಮೂಲಕ ಕರ್ನಾಟಕದ ಕೀರ್ತಿಯನ್ನು ಜಗತ್ತಿನಾದ್ಯಂತ ಪಸರಿಸಿದ ಬಿ.ಕೆ.ಎಸ್.ಅಯ್ಯಂಗಾರ್ ನಮ್ಮನ್ನು ಅಗಲಿದ್ದಾರೆ. ಇಂತಹ ಘನತೆವೆತ್ತ ಶಿಕ್ಷಕರ ಕಣ್ಮರೆಯಿಂದ ತೆರವಾಗುವ ಶೂನ್ಯವನ್ನು ತುಂಬುವುದು ಸುಲಭವಲ್ಲ. ಈ ಇಬ್ಬರ ವ್ಯಕ್ತಿತ್ವವನ್ನು ರೂಪಿಸುವುದರಲ್ಲೂ ಅವರ ಶಿಕ್ಷಕರ ಪಾತ್ರ ಮಹತ್ವದ್ದು. ಅಂತಹ ಶಿಕ್ಷಕರ ಸಂಖ್ಯೆ ನೂರ್ಮಡಿಯಾಗಲಿ.

■ ಬಿ.ಎಂ.ಹನೀಫ್



ಈಶ್ವರ್